ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

ಕುಣಿಗಲ್ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 22.10.2013

ಈ ವಾರದ ಮುನ್ಸೂಚನೆ (ದಿನಾಂಕ 23-10-13 to 27.10.13 ವರೆಗೆ)

ನಿಯತಾಂಕಗಳು	23.10.13	24.10.13	25.10.13	26.10.13	27.10.13
ಮಳೆ (ಮಿ ಮಿ)	24	34	25	16	12
ಗರಿಷ್ಠ ಉಷ್ಣಾಂಶ(ಡಿ.ಸೆ.)	26	25	26	26	26
ಕನಿಷ್ಠ ಉಷ್ಣಾಂಶ (ಡಿ.ಸೆ.)	18	19	18	19	17
ಮೋಡ (ಪ್ರಮಾಣ)	8	8	7	7	7
ಅರ್ದ್ರತೆ ೭.೨೦ ಬೆ (ಶೇ)	92	92	90	89	90
ಅರ್ದ್ರತೆ ೨.೨೦ ಮ (ಶೇ)	83	75	91	77	78
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	9	5	6	4
ಗಾಳಿಯ ದಿಕ್ಕು (ಡಿಗ್ರಿ)	210	160	150	180	210

ಈ ವಾರದ ಮುನ್ಸೂಚನೆಯ ಪ್ರಕಾರ ಮತ್ತು ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಕವಿದ ವಾತಾವರಣವಿದ್ದು ಸಂಜೆ ಅಥವಾ ರಾತ್ರಿಯ ವೇಳೆಯಲ್ಲಿ ಸಾದಾರಣದಿಂದ ಹಗುರ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ 25.0-26.0^{o}C ಮತ್ತು ಕನಿಷ್ಠ 17-19°C ಇರಲಿದೆ. ಬೆಳಗಿನ ಅರ್ದ್ರತೆ ಪ್ರಮಾಣ ಶೇ 89-92% ಇದ್ದು ಮಧ್ಯಾಹ್ನ 75-91 % ಇದ್ದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 4-9 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಬಿತ್ತನೆ ಮಾಡದ ಪ್ರದೇಶದಲ್ಲಿ ಸಾಕಷ್ಟು ತೇವಾಂಶವಿದ್ದಲ್ಲಿ ಅಲ್ಪಾವಧಿಯ ದ್ವಿದಳ ದಾನ್ಯ ಬೆಳೆ ತಳಿಗಳಾದ ಹುರಳಿ (ಕೆ,ಬಿ,ಹೆಚ್–1, ಪಿ,ಹೆಚ್,ಜಿ–9) ಬಿತ್ತನೆ ಮಾಡುವುದು ಉತ್ತಮ.
- ರಾಗಿ ಮತ್ತು ಮುಸುಕಿನ ಜೋಳಕ್ಕೆ ಶಿಫಾರಸ್ಸು ಮಾಡಿದ ಸಾರಜನಕ ಮೇಲುಗೊಬ್ಬರ ಕೊಡಲು ಸೂಚಿಸಲಾಗಿದೆ.
- ರಾಗಿಯಲ್ಲಿ ಬೆಂಕಿರೋಗವಿರುವುದು ಕಂಡುಬಂದಿದೆ ಆದ್ದರಿಂದ ರೋಗ ಬಂದಿರುವ ಕಡೆ ಬಾವಿಸ್ಟಿನ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸವುದು ಒಳ್ಳೆಯದು.
- ನೆಲೆಗಡಲೆಗೆ ಬೆಳೆಯಲ್ಲಿ ಎಲೆಚುಕ್ಕೆ ರೋಗ (ಟಿಕ್ಕಾ) ಬರುವ ಲಕ್ಷಣಗಳಿರುವುದರಿಂದ ಕಾರ್ಬೆಂಡೈಜಿಮ್ ಶಿಲಿಂದ್ರನಾಶಕವನ್ನು 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ತೊಗರಿಯಲ್ಲಿ ಗೂಡು ಮಾರು ಅಥವಾ ಹೂ ಗೊಂಚಲು ಮತ್ತು ಎಲೆಯ ಸುಳಿಯನ್ನು ಮುದುಡಿ ಬಲೆ ಕಟ್ಟುವ ಹುಳು ಕಂಡುಬಂದಲ್ಲಿ ಮಿಥೊಮಿಲ್ 1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ ಮಳೆ ಇಲ್ಲದಿರುವಾಗ ಸಿಂಪಡಿಸಲು ಸೂಚಿಸಲಾಗಿದೆ.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.